ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೪ | ೧ ನವೆಂಬರ್ ೨೦೨೨ | ಸಂಚಿಕೆ ೨

ದಿನನಿತ್ಯದ ಜೀವನ ಸಂಬಂಧ ಒಂದು ಅಸಾಧಾರಣ ಚಲನೆ. ಇದು ದಿನನಿತ್ಯದ ಜೀವನದಿಂದ ಮಾಡುವ ಪಲಾಯನವಾಗಿದ್ದಲ್ಲಿ ತಥಾಕಥಿತ ಸಾಕ್ಷಾತ್ಕಾರ, ತಥಾಕಥಿತ ಜ್ಞಾನೋದಯ ಅಥವಾ ಮತ್ತೇನೋ ಎಲ್ಲ ಭ್ರಮೆ ಮತ್ತು ಬೂಟಾಟಿಕೆ. ಒಲವು, ಜೀವನದ ತಿಳಿವಳಿಕೆ ಹಾಗೂ ಕ್ರಿಯೆಯನ್ನು ನಿರಾಕರಿಸುವುದೆಲ್ಲ ಕಿಡಿಗೇಡಿತನದ್ದು; ಅದು ಮನಸ್ಸನ್ನು ವಿರೂಪಗೊಳಿಸುತ್ತದೆ; ಬದುಕನ್ನು ಘೋರ ನರಕವಾಗಿಸುತ್ತದೆ. ಹೀಗಾಗಿ ನಾವು ಅದನ್ನು ಸಿದ್ಧಸೂತ್ರವೆಂದು ಪರಿಗಣಿಸಿದರೆ ಪ್ರಾಯಃ ಜ್ಞಾನೋದಯವನ್ನು ಜೀವಿಸುವ ಕ್ರಮದಲ್ಲಿ ಕಂಡುಕೊಳ್ಳಬಹುದೇ ಎಂಬುದನ್ನು ಪರಿಶೀಲಿಸಬಹುದು.

ಜೆ. ಕೃಷ್ಣಮೂರ್ತಿ

ಪರಿವರ್ತನೆಯ ಸವಾಲು

ಮನಸ್ಸು ಯಾಕೆ ಕೊಳೆಯುತ್ತದೆ ಎಂದು ಕೇಳಿಕೊಳ್ಳಿ ನಿಜ. ದೇಹಕ್ಕೆ ಇಂದಲ್ಲ, ನಾಳೆ ಸಾವು ಖಂಡಿತ. ಆದರೆ ನಮ್ಮಲ್ಲಿ ಅನೇಕರ ಮನಸ್ಸುಗಳು ಈಗಾಗಲೇ ಸತ್ತಿವೆ. ಕೊಳೆಯುವ ಕ್ರಿಯಯು ಆಗಲೇ ನಡೆದು ಹೋಗಿದೆ. ಮನಸ್ಸುಗಳು ಕೊಳೆಯುವುದು ಯಾಕೆ? ಸತತವಾಗಿ ಉಪಯೋಗಿಸುವುದರಿಂದ ಭೌತಿಕರಚನೆಯಾದ ದೇಹವು ಸವೆಯುತ್ತದೆ. ಕೊಳೆಯುತ್ತದೆ. ರೋಗ, ಅಪಘಾತ, ವದ್ಧಾಪ್ಯ, ಕೆಟ್ಟ ಆಹಾರ, ಅನುವಂಶಿಕ ಸಂಗತಿಗಳು ಇವೆಲ್ಲ ದೇಹದ ಅವನತಿಗೆ ಮತ್ತು ಸಾವಿಗೆ ಕಾರಣವಾಗುವ ಅಂಶಗಳು. ಆದರೆ ಮನಸ್ಸು ಯಾಕೆ ಕೊಳೆಯಬೇಕು? ಮಂಕುತನ, ಮುದಿತನ ಮತ್ತು ಹಾಗೂ ಭಾರಗಳು ಅದನ್ನು ಯಾಕೆ ಆವರಿಸಬೇಕು? ಹೆಣವನ್ನು ನೋಡಿದಾಗ ನೀವು ಇದೆಲ್ಲದರ ಬಗ್ಗೆ ಆಲೋಚಿಸಿಲ್ಲವೇ? ದೇಹಗಳು ನಾಶವಾಗುವುದು ಅನಿವಾರ್ಯವಾದರೂ ಮನಸ್ಸಿನ ಅವನತಿ ಎಂದಾದರೂ ಯಾಕೆ ಜರುಗಬೇಕು? ಈ ಪ್ರಶ್ನೆಯು ನಿಮ್ಮ ಮನಸ್ಸಿನಲ್ಲಿ ಮೂಡಿಯೇ ಇಲ್ಲವೇ? ಹೌದು. ಮನಸ್ಸು ನಿಜವಾಗಿಯೂ ಕೊಳೆಯುತ್ತದೆ. ಈ ಪ್ರಕ್ರಿಯೆಯನ್ನು ಮುದುಕರಲ್ಲಿ ಮಾತ್ರವಲ್ಲ. ತರುಣರಲ್ಲಿಯೂ ನೋಡಬಹುದು. ಯುವಕ ಯುವತಿಯರ ಮನಸ್ಸುಗಳು ನಿಧಾನವಾಗಿ ಸಂವೇದನೆ ಶೂನ್ಯವೂ ಜಡವೂ, ನಿಸ್ತೇಜವೂ ಆಗುತ್ತಿರುವುದನ್ನು ನಾವು ಗಮನಿಸಬಹುದು. ಮನಸ್ಸು ಕೊಳೆಯುವುದರ ಕಾರಣವನ್ನು ನಾವು ಕಂಡುಕೊಂಡರೆ ನಿಜವಾಗಿಯೂ ಅವಿನಾಶಿಯಾದ ಸಂಗತಿಯೊಂದು ನಮ್ಮ ಅರಿವಿನ ಪರಿಧಿಯೊಳಗೆ ಬರಬಹುದು. ಆಗ ಮುಕ್ತಾಯವೇ ಇಲ್ಲದ ಶಾಶ್ವತ ಜೀವನದ ಸ್ವರೂಪವು ನಮಗೆ ಗೋಚರವಾಗಬಹುದು. ಕಾಲದ ತೆಕ್ಕೆಗೆ ಸಿಗದ,

> *"ಧರ್ಮವು ಜೀವನದಿಂದ ಬೇರೆಯಾದುದಲ್ಲ; ಅದು ಜೀವನವೇ ಆಗಿದೆ. ಧರ್ಮ ಹಾಗೂ ಜೀವನದ ನಡುವಿನ ಈ ಭೇದವೇ ನೀವು ಹೇಳಿರುವ ಎಲ್ಲ ದುಃಖಗಳಿಗೆ ಕಾರಣ".*
>
> **ಜೆ. ಕೃಷ್ಣಮೂರ್ತಿ**

ಸ್ಮಶಾನಗಳಿಗೆ ತೆಗೆದುಕೊಂಡುಹೋಗಿ ಭಸ್ಮ ಮಾಡುವ ದೇಹಗಳಂತೆ ನಶಿಸಿಹೋಗದ, ಜೀವದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಹೌದು. ಮನಸ್ಸು ಕೊಳೆಯುವುದಾದರೂ ಯಾಕೆ? ಈ ಕುರಿತು ಎಂದಾದರೂ ಯೋಚಿಸಿರುವಿರಾ? ನೀವು ಇನ್ನೂ ಎಳೆಯರು. ತಂದೆ-ತಾಯಿ, ಸಮಾಜ ಮತ್ತು ಸಮಯ ಸಂದರ್ಭಗಳು ಈಗಾಗಲೇ ನಿಮಗೆ ಮಂಕು ಹಿಡಿಸದೆ ಇದ್ದರೆ, ನಿಮ್ಮದು ತಾಜಾ ಆದ, ನಿತ್ಯ ಕುತೂಹಲಿಯಾದ, ವಿಸ್ಮಯತುಂಬಿದ ಮನಸ್ಸು. ನಿಮ್ಮ ಮನಸ್ಸಿನ ತುಂಬ ಪ್ರಶ್ನೆಗಳ ಚಿಲುಮೆ. ನಕ್ಷತ್ರಗಳು ಮಿನುಗುವುದೇಕೆ? ಪಕ್ಷಿಗಳು ಸಾಯುವುದೇಕೆ? ಎಲೆಗಳು ಬೀಳುವುದೇಕೆ? ಜೆಟ್ ವಿಮಾನ ಹಾರುವುದು ಹೇಗೆ? ಆದರೆ ಈ ಜೀವಂತ ಕುತೂಹಲ, ಸತ್ಯಶೋಧನೆಯ ಹಂಬಲ ನಿಧಾನವಾಗಿ ಉಸಿರುಕಟ್ಟುತ್ತದೆ. ಅಲ್ಲವೇ? ಭಯ, ಪರಂಪರೆಯ ಭಾರ, ಜೀವನವನ್ನು ಎದುರಿಸಲಾಗದ ನಮ್ಮದೇ ಅಸಾಮರ್ಥ್ಯ ಎಲ್ಲವೂ ಸೇರಿ ಜೀವಂತ ಕುತೂಹಲದ ಕತ್ತುಹಿಚುಕುತ್ತವೆ. ಕಟುಮಾತು, ವ್ಯಂಗ್ಯತುಂಬಿದ ಭಾವಭಂಗಿ, ಪರೀಕ್ಷೆಯ ಭಯ, ಹೆದರಿಸುವ ತಂದೆ ತಾಯಿ ಯಾವುದಾದರೂ ಸರಿ. ಮನಸ್ಸನ್ನು ನಲುಗಿಸಿಬಿಡುತ್ತವೆ. ಸಂವೇದನಶೀಲತೆಯನ್ನು ಪಕ್ಕಕ್ಕೆ ನೂಕಿ ಮಂಕು ಆವರಿಸಿಕೊಳ್ಳುತ್ತದೆ. ಈ ಮಂಕುತನಕ್ಕೆ ಇನ್ನೊಂದು ಕಾರಣ ಅನುಕರಣೆ. ಪರಂಪರೆಯು ಅನುಕರಣೆ ಮಾಡುವಂತೆ ಒತ್ತಾಯಮಾಡುತ್ತದೆ. ಭೂತಕಾಲದ ಭಾರವು ಅನುಕರಣೆಯನ್ನು ಅಪೇಕ್ಷಿಸುತ್ತದೆ. ತಾನು ತೋರಿಸುವ ಹಾದಿಯಲ್ಲಿ ಹೆಜ್ಜೆ ಹಾಕುವಂತೆ ಮಾಡುತ್ತದೆ. ಇಂಥ ಅನುಸರಣೆಯ ಫಲವಾಗಿ ಮನಸ್ಸಿಗೆ ಕ್ಷೇಮದ,

ಸುರಕ್ಷಿತಸ್ಥಿತಿಯ ಭಾವನೆ ಮೂಡುತ್ತದೆ. ನಡೆದುನಡೆದು ಸುಗಮವಾಗಿರುವ ಬಂಡಿ ಜಾಡಿನಲ್ಲಿ, ಅನುಮಾನದ ಲವಲೇಶವೂ ಇಲ್ಲದೆ, ವಿಚಲಿತವಾಗದೆ ಚಲಿಸ ತೊಡಗುತ್ತದೆ. *ನಿಮ್ಮ ಸುತ್ತಲೂ ಇರುವ ವಯಸ್ಕರನ್ನು ಗಮನಿಸಿ. ಅವರ ಮನಸ್ಸಿನ ಸಮಾಧಾನವನ್ನು ಯಾರೂ ಕೆಡಿಸದಿದ್ದರೆ ಅಷ್ಟೆ ಸಾಕು. ಅವರಿಗೆ ಶಾಂತಿ ಬೇಕು. ಅದು ಸಾವಿನ ಶಾಂತಿಯಾದರೂ ಪರವಾಗಿಲ್ಲ.* ಆದರೆ ನಿಜವಾದ ಶಾಂತಿಯು ಸಂಪೂರ್ಣವಾಗಿ ಭಿನ್ನವಾದುದು. ಅಭ್ಯಾಸವಾಗಿರುವ ವಿನ್ಯಾಸಗಳಲ್ಲಿ ಸ್ಥಿತವಾಗಿರುವ ಮನಸ್ಸು ಸದಾಕಾಲವೂ ಭದ್ರತೆಯನ್ನು ಬಯಸುತ್ತದೆ. ಈ ಸಂಗತಿಯು ನಿಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದಲೇ ಅಂಥ ಮನಸ್ಸು ಆದರ್ಶವನ್ನು, ಮಾದರಿಗಳನ್ನು ಗುರುವನ್ನು ಅನುಸರಿಸುತ್ತದೆ. ಅದಕ್ಕೆ ಭದ್ರತೆ ಬೇಕು. ತಲೆಕೆಡದಿರುವುದು ಬೇಕು. ಆದ್ದರಿಂದ ಅದು ಅನುಕರಣೆಯಲ್ಲಿ ತೃಪ್ತಿಪಡೆಯುತ್ತದೆ. ಇತಿಹಾಸದ ಪಠ್ಯಪುಸ್ತಕಗಳಲ್ಲಿ ಮಹಾನ್ ನಾಯಕರ, ಸಾಧುಸಂತರ, ಯುದ್ಧವೀರರ ಬಗ್ಗೆ ಓದಿದಾಗ, ಅವನನ್ನು ನಕಲು ಮಾಡಬೇಕೆಂದು ಬಯಕೆ ಮೂಡುವುದಿಲ್ಲವೇ? ಈ ಲೋಕದಲ್ಲಿ ಅಂಥ ಮಹಾನು ಭಾವರು ಇಲ್ಲವೆಂದಲ್ಲ. ಆದರೆ ಯಾರೋ ದೊಡ್ಡಮನುಷ್ಯರನ್ನು ಅನುಕರಿಸಬೇಕು, ಅವರಂತೆ ಆಗಬೇಕು ಎಂಬ ಅನಿಸಿಕೆಯೇ ಮನಸ್ಸಿನ ಅವನತಿಯ ಕಾರಣಗಳಲ್ಲಿ ಒಂದು. ಯಾಕೆಂದರೆ ಆಗ ಮನಸ್ಸು ಪೂರ್ವನಿಶ್ಚಿತವಾದ ಅಚ್ಚುಗಳಲ್ಲಿ ನೆಲೆನಿಲ್ಲುತ್ತದೆ. ಅಷ್ಟೇ ಅಲ್ಲ. ಸದಾ ಜಾಗೃತರಾದ, ಕುತೂಹಲಿಗಳಾದ, ಕ್ರಾಂತಿಕಾರಿಗಳಾದ ವ್ಯಕ್ತಿಗಳು ಸಮಾಜಕ್ಕೂ ಬೇಡ. ಅಂತಹವರು ಸ್ಥಾಪಿತವಾದ ಸಾಮಾಜಿಕ ವಿನ್ಯಾಸಗಳಲ್ಲಿ ಹೊಂದಿಕೊಳ್ಳದೇ ಅವುಗಳನ್ನು ಮುರಿಯಬಹುದು. ಆದ್ದರಿಂದಲೇ ಸಮಾಜವು ನಿಮ್ಮ ಮನಸ್ಸನ್ನು ತನ್ನ ಚೌಕಟ್ಟಿನಲ್ಲಿ ಸೆರೆಯಿಡಬಯಸುತ್ತದೆ. ಶಿಕ್ಷಣವೆಂದು ಕರೆಯಲಾಗುವ ಸಂಗತಿಯಂತೂ ಅನುಕರಣೆ. ಅನುಸರಣೆ, ಪರಿಪಾಲನೆಗಳನ್ನೇ ಪ್ರೋತ್ಸಾಹಿಸುತ್ತದೆ. ಈಗ ಹೇಳಿ. ಮನಸ್ಸು ಅನುಕರಣೆಯನ್ನು ನಿಲ್ಲಿಸಬಲ್ಲುದೇ? ಎಂದರೆ ಅಭ್ಯಾಸಗಳ ರೂಪಣದಿಂದ ಬಿಡುಗಡೆ ಪಡೆಯಬಲ್ಲುದೇ? ಈಗಾಗಲೇ ಅಭ್ಯಾಸಗಳಿಗೆ ಸೆರೆಸಿಕ್ಕಿರುವ ಮನಸ್ಸು ಅದರಿಂದ ಬಿಡಿಸಿಕೊಳ್ಳಬಲ್ಲುದೇ? ಮನಸ್ಸು ಅಭ್ಯಾಸಗಳಫಲಿತಾಂಶವೇ ಅಲ್ಲವೇನು? ಅದು ಸಂಪ್ರದಾಯದ, ಕಾಲದ ಫಲಿತಾಂಶ. ಕಾಲವೆನ್ನುವುದು ಗತದ ಮುಂದುವರಿಕೆ, ಅದು ಪುನರಾವರ್ತನೆಗಳ ಸರಣಿ. ಮನಸ್ಸು, *ನಿಮ್ಮ ಮನಸ್ಸು ಆಗಿಹೋಗಿರುವುದರ ಹಿನ್ನೆಲೆಯಲ್ಲಿ ಆಲೋಚಿಸುವುದನ್ನು ನಿಲ್ಲಿಸಬಲ್ಲುದೇ?* ನಿಮ್ಮ ಮನಸ್ಸು ಅಭ್ಯಾಸಗಳಿಂದ, ಹಾಗೂ ಅಭ್ಯಾಸಗಳ ರೂಪಣ ಕ್ರಿಯೆಯಿಂದ ಸ್ವತಂತ್ರವಾಗುವುದು ಸಾಧ್ಯವೇ? ಈ ಸಮಸ್ಯೆಯನ್ನು ಕುರಿತು ಆಳವಾಗಿ ಚಿಂತಿಸಿದರೆ ಇದು ಸಾಧ್ಯವೆಂದು ನಿಮಗೆ ಮನದಟ್ಟಾಗುತ್ತದೆ. ಹೀಗೆ, ಹೊಸ ವಿನ್ಯಾಸಗಳನ್ನು ಅಭ್ಯಾಸಗಳನ್ನು ರೂಪಿಸಿಕೊಳ್ಳದೆ, ಅನುಕರಣೆಯ ಸವೆದ ದಾರಿಯಲ್ಲಿ ಸಿಕ್ಕಿಕೊಳ್ಳದೆ, ನಿತ್ಯವೂ ನವೀಕರಣಗೊಳ್ಳುವ ಮನಸ್ಸು ಹೊಚ್ಚಹೊಸದಾಗಿ, ತರುಣವಾಗಿ, ಮುಗ್ಧವಾಗಿ ಉಳಿಯುತ್ತದೆ. ಅದಕ್ಕೆ ಅನಂತವಾದ ತಿಳಿವಳಿಕೆಯು ಸಹಜಸಾಧ್ಯವಾಗುತ್ತದೆ. ಅಂಥ ಮನಸ್ಸಿಗೆ ಸಾವಿಲ್ಲ. ಏಕೆಂದರೆ ಅಲ್ಲಿ ಸ್ಮೃತಿ ಸಂಚಯದ ಪ್ರಕ್ರಿಯೆಯೇ ಇಲ್ಲ. ಇಂಥ ಸಂಚಯದಲ್ಲಿಯೇ ಅನುಕರಣೆ, ಅಭ್ಯಾಸಗಳು ಮನೆಮಾಡಿರುತ್ತವೆ. ಹೀಗೆ ಸಂಗ್ರಹಿಸುವ ಮನಸ್ಸಿಗೆ ಕೊಳೆಯುವಿಕೆ, ಸಾವು ಸಹಜ. ಆದರೆ, ಏನನ್ನೂ ಕೂಡಿ ಹಾಕದೆ, ನೆನಪುಗಳನ್ನು

ಎಲ್ಲಿ "ಪ್ರೀತಿ" ಇದೆಯೋ, ಅಲ್ಲಿ ಏನೇ ಮಾಡಿದರೂ ತಪ್ಪಾಗುವುದಿಲ್ಲ. ಆದರೆ ಪ್ರೀತಿಯಿಲ್ಲದೇ ನಾವು ಎಲ್ಲವನ್ನೂ ಮಾಡುತ್ತಿದ್ದೇವೆ. ಅದಕ್ಕೆಂದೇ ನಾವು ಮಾಡಿದ್ದೆಲ್ಲವೂ ತಪ್ಪು ದಾರಿ ಹಿಡಿಯುತ್ತಿವೆ.

ಜೆ. ಕೃಷ್ಣಮೂರ್ತಿ

ಗುಡ್ಡೆಮಾಡಿಕೊಳ್ಳದೆ, ಪ್ರತಿದಿನವೂ ಪ್ರತಿಕ್ಷಣವೂ ಸಾಯುತ್ತಿರುವ ಮನಸ್ಸಿಗೆ ಸಾವು ಎಲ್ಲಿಂದ ಬಂತು? ಅದರದು ಅನಂತವಾದ ಅವಕಾಶದಲ್ಲಿ ಮನೆಮಾಡಿರುವ ಸ್ಥಿತಿ. ಆದ್ದರಿಂದ ಮನಸ್ಸು ತಾನು ಸಂಗ್ರಹಿಸಿಟ್ಟುಕೊಂಡಿರುವ ಎಲ್ಲ ಸಂಗತಿಗಳ ಮಟ್ಟಿಗೂ ಸಾಯಬೇಕು. ಅಭ್ಯಾಸಗಳು, ಅನುಕರಣೆ ಮಾಡಿರುವ ಸುಗುಣಗಳ ಸಮೂಹ, ಭದ್ರತೆಯ ಭಾವಕ್ಕಾಗಿ ತಾನು ಅವಲಂಬಿಸಿರುವ ಎಲ್ಲ ಎಲ್ಲ ಸಂಗತಿಗಳೂ ಇನ್ನಿಲ್ಲವೆಂಬಂತೆ ಅಳಿಸಿಹೋಗಬೇಕು. ಆಗ ಅದು ತನ್ನದೇ ಆಲೋಚನೆಗಳ ಬಲೆಯಲ್ಲಿ ಸೆರೆಯಾಗುವುದಿಲ್ಲ. ಗತಕಾಲಕ್ಕೆ ಸಾಯುವುದರ ಪರಿಣಾಮವಾಗಿ ಮನಸ್ಸು ಕ್ಷಣ ಕ್ಷಣವೂ ನಿತ್ಯನೂತನವಾಗುತ್ತದೆ. ಆದ್ದರಿಂದ ಅದು ಕೊಳೆಯುವುದಿಲ್ಲ. ಅಥವಾ ಕತ್ತಲಿನ ಅಲೆಗಳ ಚಲನೆಗೆ ಎಡೆಮಾಡಿಕೊಡುವುದಿಲ್ಲ.

ಪ್ರಶ್ನೆ : ನೀವು ಹೇಳುತ್ತಿರುವುದನ್ನು ಆಚರಣೆಗೆ ತರುವುದು ಹೇಗೆ?

ಕೃಷ್ಣಮೂರ್ತಿ : ಯಾರೋ ಒಂದು ಮಾತು ಹೇಳುತ್ತಾರೆ. ಅದು ಸರಿಯೆಂದು ನಿಮಗೆ ತೋರುತ್ತದೆ. ದಿನನಿತ್ಯದ ಬದುಕಿನಲ್ಲಿ ಹಾಗೆ ನಡೆದು ಕೊಳ್ಳಬೇಕೆಂದು ನಿಮ್ಮ ಆಸೆ. ಅದು ಸಾಧ್ಯವಾಗುತ್ತಿಲ್ಲ. ನಿಮ್ಮ ಆಲೋಚನೆಗೂ ಕ್ರಿಯೆಗೂ ಅಂತರ ತಲೆದೋರಿದೆ. ನಂಬಿರುವುದು ಒಂದು ಮಾಡುತ್ತಿರುವುದು ಮತ್ತೊಂದು. ಈ ಅಂತರವನ್ನು ಹೇಗೆ ಸರಿಪಡಿಸಬೇಕು? ಬಗೆದಂತೆ ಬದುಕುವುದು ಹೇಗೆ ಎನ್ನುವುದು ನಿಮ್ಮ ಸಮಸ್ಯೆ. ನೋಡಿ, ಯಾವುದಾದರೂ ಕೆಲಸವನ್ನು ಮಾಡಲೇಬೇಕೆಂಬ ಹಂಬಲ ಅತ್ಯಂತ ತೀವ್ರವಾಗಿದ್ದರೆ, ಅದನ್ನು ಮಾಡುತ್ತೀರಿ. ಹೊರಗೆ ಹೋಗಬೇಕು. ಕ್ರಿಕೆಟ್ ಆಡಬೇಕು ಎಂದು ತೀರ್ಮಾನಿಸಿದರೆ, ಹಾಗೆ ಮಾಡುವ ಮಾರ್ಗೋಪಾಯಗಳನ್ನು ಕಂಡು ಕೊಳ್ಳುತ್ತೀರಿ. ಅದನ್ನು ಆಚರಣೆಗೆ ತರುವುದು ಹೇಗೆ ಎಂದು ಪ್ರಶ್ನಿಸುತ್ತಾ ಕೂಡುವುದಿಲ್ಲ. ಏಕೆಂದರೆ ನಿಮ್ಮ ಹೃದಯ, ಮನಸ್ಸು, ಸಮಗ್ರ ಅಸ್ತಿತ್ವವೇ ಅದರಲ್ಲಿದೆ. ಆದರೆ, ಈ ಇನ್ನೊಂದು ವಿಷಯ ಬಂದಾಗ ನೀವು ಜಾಣತನ ಉಪಯೋಗಿಸುತ್ತೀರಿ. ಒಂದಲ್ಲ ಒಂದು ಕಾರಣ, ನೆಪ ನಿಮ್ಮ ನೆರವಿಗೆ ಬರುತ್ತದೆ. ನಿಮ್ಮ ಅನಿಸಿಕೆಯೇ ಬೇರೆ, ಆಚರಣೆಯೇ ಬೇರೆ. ನಿಮ್ಮ ವಾದಸರಣಿ ಹೀಗಿರುತ್ತದೆ; "ಇದು ಅತ್ಯುತ್ತಮವಾದ ಆಲೋಚನೆ. ಬೌದ್ಧಿಕವಾಗಿ ಇದಕ್ಕೆ ನನ್ನ ಸಮ್ಮತಿಯಿದೆ. ಆದರೆ, ಇದನ್ನು ಕ್ರಿಯೆಯಲ್ಲಿ ಮಾಡುವುದು ಹೇಗೆಂದು ತೋರುತ್ತಿಲ್ಲ. ದಯವಿಟ್ಟು ನನಗೆ ನೆರವು ನೀಡಿ" ಹಾಗೆಂದರೆ ನಿಮಗೆ ಅದರಂತೆ ನಡೆಯುವುದು ಇಷ್ಟವಿಲ್ಲವೆಂದೇ ಅರ್ಥ. ನಿಮ್ಮ ನಿಜವಾದ ಅಪೇಕ್ಷೆ ಕ್ರಿಯೆಯನ್ನು ಮುಂದೆ ಹಾಕುವುದು. ಯಾಕೆಂದರೆ, ಆ ಹೊಟ್ಟೆಕಿಚ್ಚು ಅಥವಾ ಮತ್ತೊಂದು ಗುಣ ನಿಮಗೂ ಇಷ್ಟವೇ.

"ಮನಸ್ಸನ್ನು ಖಾಲಿಗೊಳಿಸುವುದು ಹೇಗೆ ಎಂಬುದು ಪ್ರಶ್ನೆಯಲ್ಲ. ವಸ್ತುವಿನಿಂದ ರೂಪಿತವಾದ ಪ್ರಜ್ಞೆ ಅದನ್ನು ಪೂರ್ಣವಾಗಿ ನೋಡುವುದು, ಪರಿಭಾವಿಸುವುದು, ಪ್ರಜ್ಞೆಯ ಎಲ್ಲ ಚಲನೆಯನ್ನು ಆಲಿಸುವುದು ಮತ್ತು ಅದರ ಪರಿಭಾವನೆಯೇ ಅದರ ಕೊನೆ. ಹೇಗೆ ಕೊನೆಗೊಳಿಸುವುದು ಎಂಬುದಲ್ಲ, ಹುಸಿ ಯಾವುದು ಎಂದು ನಾನು ಕಂಡುಕೊಂಡರೆ ಆ ಹುಸಿಯ ಪರಿಭಾವನೆಯೇ ನಿಜವಾದುದು".

ಜೆ. ಕೃಷ್ಣಮೂರ್ತಿ

"ಎಲ್ಲರೂ ಮತ್ಸರಗ್ರಸ್ತರೇ ನಾನೇಕೆ ಹಾಗಿರಬಾರದು?" ಸರಿ. ನೀವು ಮೊದಲಿನಂತೆಯೇ ಮುಂದುವರಿಯುತ್ತೀರಿ. ನಿಜವಾಗಿಯೂ ಮತ್ಸರದ ಬಗ್ಗೆ ನಿಮಗೆ ಬೇಸರವಾಗಿದ್ದರೆ, ಅದರ ನಿಜಸ್ವರೂಪವನ್ನು ನಾಗರಹಾವಿನ ವಿಷದ ಹಾಗೆ ಗ್ರಹಿಸಲು ಸಾಧ್ಯವಾದರೆ ಆಗ ಅದು ನಿಮ್ಮಿಂದ ದೂರವಾಗುತ್ತದೆ. ಅಲ್ಲಿಗೆ ಮುಗಿಯಿತು. ಪ್ರಶ್ನೆಗಳ ಪಡಿಪಾಟಲೇ ಇಲ್ಲ. ಯಾವುದೇ ಸಂಗತಿಯನ್ನು ನಿಜಸ್ವರೂಪವನ್ನು ಕಂಡುಕೊಳ್ಳುವುದು ಮುಖ್ಯ. ಅದನ್ನು ಜಾರಿಗೆ ತರುವ ದಾರಿಯ ಬಗ್ಗೆ ಊಹಾಪೋಹಗಳಲ್ಲಿ ತೊಡಗುವುದಲ್ಲ. ಹಾಗೆ ಮಾಡಿದರೆ ಅದರಲ್ಲಿ ನಿಮಗೆ ಆಸಕ್ತಿಯಿಲ್ಲವೆಂದೇ ಅರ್ಥ. ನಾಗರಹಾವನ್ನು ಹಾದಿಯಲ್ಲಿ ಕಂಡಾಗ, ``ನಾನೀಗ ಏನು ಮಾಡಲಿ?'' ಎಂದು ಆಲೋಚನೆಗೆ ತೊಡಗುವುದಿಲ್ಲ. ಅದರ ಅಪಾಯವನ್ನು ಅರಿತುಕೊಂಡು ದೂರಸರಿಯುತ್ತೀರಿ. ಆದರೆ ಮತ್ಸರದ ನಿಜ ಸ್ವರೂಪವನ್ನು ಕುರಿತು, ಅದರ ಪರಿಣಾಮಗಳನ್ನು ಕುರಿತು ನೀವು ಗಂಭೀರವಾಗಿ ಚಿಂತಿಸಿಲ್ಲ. ಯಾರೂ ಅದರ ಬಗ್ಗೆ ನಿಮ್ಮೊಂದಿಗೆ ಚರ್ಚೆನಡೆಸಿಲ್ಲ. ಎಲ್ಲರೂ ಹೊಟ್ಟೆಕಿಚ್ಚು ಪಡಬಾರದೆಂದು ಹೇಳಿ ಸುಮ್ಮನಾಗುತ್ತಾರೆ. ಆದರೆ ಇಡೀ ಸಮಾಜ ಹಾಗೂ ಸಂಘಟಿತವಾದ ಧರ್ಮಗಳೆಲ್ಲದರ ತಳಹದಿಯೂ ಮತ್ಸರವೇ ಎಂಬ ಸಂಗತಿ ನಿಮ್ಮ ಗಮನಕ್ಕೆ ಬಂದಿರುವುದಿಲ್ಲ.

"ಒಂದು ಮರದ ಕೆಳಗೆ ಸುಮ್ಮನೆ ನಿನ್ನಷ್ಟಕ್ಕೆ ನೀನು ಕುಳಿತುಕೊ, ಪುಸ್ತಕದೊಂದಿಗೆ ಅಲ್ಲ. ಸುಮ್ಮನೆ ನಕ್ಷತ್ರಗಳತ್ತ, ಮೋಡವಿಲ್ಲದ ಆಕಾಶದತ್ತ, ಹಕ್ಕಿಗಳತ್ತ, ಎಲೆಗಳ ಆಕಾರದತ್ತ ನೋಡು. ನೆರಳನ್ನು ಗಮನಿಸು".

ಜೆ. ಕೃಷ್ಣಮೂರ್ತಿ

ಇರುವುದಕ್ಕಿಂತ ಭಿನ್ನವಾದ ಬೇರೆ ಏನೋ ಆಗಬೇಕು ಎಂಬ ಅಪೇಕ್ಷೆಯೇ ಅವೆಲ್ಲದರ ಮೂಲನೆಲೆ. ಆದರೆ ಮತ್ಸರದ ನಿಜಸ್ವರೂಪವನ್ನು ತಿಳಿಯುವುದೇ ತಡ. ಅದು ತಾನಾಗಿಯೇ ಕರಗಿಹೋಗುತ್ತದೆ. "ಇದನ್ನು ಮಾಡುವುದು ಹೇಗೆ?" ಎನ್ನುವುದು ಅವಿಚಾರಿಯ ಪ್ರಶ್ನೆ. ಯಾವುದಾದರೂ ವಿಷಯದಲ್ಲಿ ನಿಜವಾದ ಆಸಕ್ತಿಯಿದ್ದು, ಅದನ್ನು ಜಾರಿಗೆ ತಿಳಿಯುವ ಮಾರ್ಗ ತಿಳಿಯದಾಗ, ಪ್ರಯತ್ನಪಟ್ಟು ಸರಿದಾರಿ ಹಿಡಿಯುವುದೇ ಮನುಷ್ಯನ ಸ್ವಭಾವ. ಆರಾಮಕುರ್ಚಿಯಲ್ಲಿ ಒರಗಿಕೊಂಡು *``ದಯವಿಟ್ಟು ದುರಾಸೆಯನ್ನು ಗೆಲ್ಲುವ ದಾರಿತೋರಿಸಿ''* ಎಂದು ಅರ್ಜಿಹಾಕಿದರೆ, ಆಸೆಬುರುಕರಾಗಿಯೇ ನಿಮ್ಮ ಜೀವನ ಸಾಗುತ್ತದೆ. ಬದಲಾಗಿ ಸಂಪೂರ್ಣ ಎಚ್ಚರದಿಂದ, ಯಾವುದೇ ಪೂರ್ವಾಗ್ರಹವಿಲ್ಲದೆ, ಸಮಗ್ರ ಅಸ್ತಿತ್ವವನ್ನೇ ತೊಡಗಿಸಿಕೊಂಡು ಪರಿಶೀಲಿಸಿದರೆ ದುರಾಸೆಯ ನಿಜಸ್ವರೂಪವನ್ನು ನೀವೇ ಗ್ರಹಿಸುತ್ತೀರಿ. ಈ ಸತ್ಯಬೋಧವೇ ನಿಮಗೆ ಬಿಡುಗಡೆಯನ್ನು ನೀಡುತ್ತದೆ. ಬಿಡುಗಡೆಯಾಗುವ ದಾರಿಯನ್ನು ಅವರಿವರಿಂದ ತಿಳಿಯುವ ಪ್ರಯತ್ನಗಳಲ್ಲ.

ಕೃತಿ: "ಮೊದಲ ಹಾಗು ಕೊನೆಯ ಬಿಡುಗಡೆ"
ಅನುವಾದ: ರುಕ್ಮಿಣಿ ಕೃಷ್ಣಮೂರ್ತಿ
ಮೂಲ: The First and Last Freedom

ಬೆಂಗಳೂರು ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿ 4 ಅಕ್ಟೋಬರ್ 2022 ರಂದು ಬೌದ್ಧ ಭಂತೆ ಸಂಘೋಂಗ್ ರಿಂಪೋಚೆ ಅವರು ಜೆ ಕೃಷ್ಣಮೂರ್ತಿ ಅವರ ಒಳನೋಟ ಕುರಿತು ಪ್ರವಚನ ನೀಡಿದರು.

ಈ ಲಿಂಕ್ ಬಳಸಿಕೊಂಡು ಪ್ರವಚನ ಆಲಿಸಬಹುದು.

https://www.youtube.com/watch?v=ViUAwj2yL_Y

ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

ಶಿಬಿರದ ಮಾಹಿತಿ (Study Retreat Themes 2022-2023) :

Nov 10-13 : Breaking free from the 'prison of the mind'.

Dec 08-11 : Retreat for Young (18-35yrs) 4 days: What are you doing with your Life?

Jan 05-08 : Significance of Living in the Here and Now' in daily life

Feb 09 - 12 : Silence, Stillness, Meditation.

Mar 09 - 12 : Living in the Grip of Fear - what does fear do to you?

Apr 06-09 : Karnataka J.K Adhayana Shibira: Understanding Relationship.
(proceedings in Kannada & English)

ಕನ್ನಡ ಸಹ ಅಧ್ಯಯನ ಶಿಬಿರ

2 ಸೆಪ್ಟೆಂಬರ್ 2022:

ಸಹ ಅಧ್ಯಯನ ಶಿಬಿರದಲ್ಲಿ ಒಟ್ಟು 12 ಸದಸ್ಯರು ಭಾಗವಹಿಸಿದ್ದರು. ವಿಶಾಲವಾದ ಪ್ರಕೃತಿಯ ಮಡಿಲಲ್ಲಿ ಜೆ ಕೃಷ್ಣಮೂರ್ತಿ ಬೋಧನೆಯ ಬೆಳಕಿನಲ್ಲಿ ಸ್ವಾಧ್ಯಾಯ ಸಂವಾದ ನೆರವೇರಿತು. ಪ್ರಕೃತಿ ನಡಿಗೆಯೊಂದಿಗೆ ಏಕಾಂತ ಹಾಗೂ ದೇಹದ ಸಂವೇದನಾಶೀಲತೆಯ ಚಟುವಟಿಕೆಯು ಕ್ರಿಯಾಶೀಲವಾಗಿ ಸಮರ್ಪಣೆಗೊಂಡಿತು. ನಲಿ ಕಲಿ ಚಟುವಟಿಕೆಯು ಆಟದೊಂದಿಗೆ ಪ್ರಾರಂಭವಾಗಿ ಆಟದ ಮಧ್ಯ ಧ್ಯಾನಸ್ತ ಗಮನಕ್ಕೂ ಅವಕಾಶ ಒದಗಿಸಲಾಯಿತು. ಈ ಅಧ್ಯಯನ ಶಿಬಿರವು ಸೃಜನಶೀಲತೆ, ಮೌನ, ಸಂಬಂಧಗಳ ಕ್ರಿಯಾಶೀಲತೆ ಹಾಗೂ ಸಂಗೀತ ಕಾರ್ಯಕ್ರಮವನ್ನು ಒಳಗೊಂಡಿತ್ತು. ಕಬೀರ ಕಾವ್ಯವನ್ನು ನಾದಮಣಿಯವರು ಗೀತಗಾಯನ ಮಾಡಿದರು.

ಬರುವ ಶಿಬಿರವು ನವೆಂಬರ್ 3 ರಿಂದ ಆರಂಭವಾಗುವುದು.

ವಿಷಯ : ಒಲವು, ಒಂಟಿತನ ಮತ್ತು ವ್ಯಾಮೋಹ

ಬೆಂಗಳೂರು ಅಧ್ಯಯನ ಕೇಂದ್ರ, ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ-ಅಧ್ಯಯನ ಶಿಬಿರ, 4 ರಿಂದ 6 ನವೆಂಬರ್ 2022

ವಿಷಯ : "ಒಲವು, ಒಂಟಿತನ ಮತ್ತು ವ್ಯಾಮೋಹ"

ಮೂರುದಿನದ ಶಿಬಿರದ ಆಶಯವು ಜೆ ಕೃಷ್ಣಮೂರ್ತಿಯವರ ಬೋಧನೆಗಳ ಬೆಳಕಿನಲ್ಲಿ **"ಒಲವು, ಒಂಟಿತನ ಮತ್ತು ವ್ಯಾಮೋಹ"** ವಿಷಯವನ್ನು ಸ್ವಾಧ್ಯಾಯ ಹಾಗೂ ಸಹ-ಅಧ್ಯಯನ ಚಟುವಟಿಕೆಗಳ ಮೂಲಕ ಶೋಧಿಸುವುದಾಗಿದೆ. ಈ ಶಿಬಿರವು ನೂರು ಎಕರೆ ವಿಸ್ತೀರ್ಣದ ಸೊಂಪಾದ ಹಸಿರು ವನದ ನೈಸರ್ಗಿಕ ಸೌಂದರ್ಯ ಹಾಗೂ ಪ್ರಶಾಂತ ಮೌನದ ವಾತಾವರಣದಲ್ಲಿ ನೆರವೇರುತ್ತದೆ. ಈ ಶಿಬಿರದ ಎಲ್ಲಾ ಚಟುವಟಿಕೆಗಳು ಮತ್ತು ಸಂವಾದಗಳು ಕನ್ನಡದಲ್ಲಿ ನಡೆಯಲಿವೆ. ಶಿಬಿರ ನಡೆಯುವ ಅಧ್ಯಯನ ಕೇಂದ್ರದಲ್ಲಿ ನಿಯಮಿತ ಸ್ಥಳಾವಕಾಶವಿರುವುದರಿಂದ, ಮೊದಲು ನೋಂದಾಯಿಸಿದ ಶಿಬಿರಾರ್ಥಿಗಳಿಗೆ ಆದ್ಯತೆಯಿರುತ್ತದೆ. ಶಿಬಿರಾರ್ಥಿಗಳು ದೂರವಾಣಿ ಅಥವಾ ಮಿಂಚಂಚೆ ಮೂಲಕ ನೋಂದಾಯಿಸಬಹುದು.

ಸೂಚನೆ:

ಶಿಬಿರಾರ್ಥಿಗಳು ನವೆಂಬರ್ 3 ನೇ ಗುರುವಾರ ಸಂಜೆ 6:30 ರಿಂದ 7:00 ಗಂಟೆಯೊಳಗೆ ಅಧ್ಯಯನ ಕೇಂದ್ರ ತಲುಪುವುದು ಅವಶ್ಯ. ಸಂಜೆ 6:30 ಕ್ಕೆ ರೇಷ್ಮೆ ಸಂಸ್ಥೆ ಮೇಟ್ರೋ ನಿಲ್ದಾಣದಿಂದ ಗುಂಪು ಸಾರಿಗೆ ವ್ಯವಸ್ಥೆ ಇರುತ್ತದೆ. ಸರಳ ಸಸ್ಯಾಹಾರಿ ಊಟ ಉಪಹಾರ ವ್ಯವಸ್ಥೆ ಇರುತ್ತದೆ. ಶಿಬಿರದ ವೆಚ್ಚಗಳಿಗಾಗಿ ಸೂಚಿಸಿದ ಕೊಡುಗೆ: ತಲಾ 5,500ರೂ ಮಾತ್ರ.

ವಿಳಾಸ:

ಅಧ್ಯಯನ ಕೇಂದ್ರ, ಬೆಂಗಳೂರು; ವ್ಯಾಲಿಶಾಲೆ ಆವರಣ,

17ನೇ ಕನಕಪುರ ರಸ್ತೆ,

ಪೋ: ತಾತಗುಣಿ, ಬೆಂಗಳುರು 560082

ದೂರವಾಣಿ: 9972995800 **ಮಿಂಚಂಚೆ:** kfistudy@gmail.com

ಜೆ.ಕೃಷ್ಣಮೂರ್ತಿ ಪುಸ್ತಕಗಳು : ರಿಯಾಯಿತಿಯಲ್ಲಿ ಲಭ್ಯ

ಆತ್ಮೀಯ ಸಹಪಯಣಿಗರೇ,ಈ ಮೇಲಿನ ಆರು ಕಿರುಪುಸ್ತಕಗಳ ಹಾಗೂ ಈ ಕೆಳಗಿನ ನಾಲ್ಕು ಪುಸ್ತಕಗಳ 100ಕ್ಕೂ ಹೆಚ್ಚು ಪ್ರತಿಗಳು 50% ವರೆಗೆ ರಿಯಾಯಿತಿ ದರದಲ್ಲಿ ಲಭ್ಯವಿವೆ. ನಿಮ್ಮ ಬಳಗದ ಗ್ರಂಥಾಲಯ, ಪುಸ್ತಕಾಲಯ, ವಿದ್ಯಾರ್ಥಿಗಳು, ಶಿಕ್ಷಕರು, ಬಂಧುಗಳು, ಇತ್ಯಾದಿ ಆಸಕ್ತರಿಗೆ ತಿಳಿಸಿ.

ಪ್ರತಿಗಳಿಗಾಗಿ ಸಂಪರ್ಕಿಸಿ – 7760807069, 9972995800.

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451/9482641389
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್